ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: Parliament

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 5/12/19

## ಮುಸ್ಲಿಮೇತರರಿಗಷ್ಟೇ ಆಶ್ರಯ, ತಿದ್ದುಪಡಿ ಮಸೂದೆಗೆ ಅಸ್ತು

# ನಿರಾಶ್ರಿತರಿಗೆ ನಾಗರಿಕತ್ವ

ನವದೆಹಲಿ: ನೆರೆಹೊರೆಯ ಮೂರು ದೇಶಗಳಿಂದ ಅಕ್ರಮವಾಗಿ ವಲಸೆ ಬಂದ ಮುಸ್ಲಿಮೇತರ ನಿರಾಶ್ರಿತರಿಗೆ ಭಾರತೀಯ ನಾಗರಿಕರೆಂದು ಮಾನ್ಯತೆ ನೀಡಲು 1955ರ ಪೌರತ್ವ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ. ಈ ಮಸೂದೆ ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲೇ ಮಂಡನೆಯಾಗಲಿದೆ. ಮುಸ್ಲಿಮೇತರ ನಿರಾಶ್ರಿತರಿಗೆ ಮಾತ್ರ ನಿಯಮ ಸಡಿಲಿಸಿ ಪೌರತ್ವಕ್ಕೆ ಪರಿಗಣಿಸುವ ಸರ್ಕಾರದ ಉದ್ದೇಶವನ್ನು ವಿರೋಧ ಪಕ್ಷಗಳು ಟೀಕಿಸಿವೆ.



» ಹಿಂದು, ಕ್ರಿಶ್ಚಿಯನ್, ಸಿಖ್, ಜೈನ, ಬೌದ್ಧ ಮತ್ತು ಪಾರ್ಸಿಗಳಿಗೆ ಅನ್ವಯ

ಪೌರತ್ವ ತಿದ್ದುಪಡಿ ಮಸೂದೆಯಲ್ಲಿ ಉಲ್ಲೇಖಿಸಿರುವ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನ ಮುಸ್ಲಿಂ ದೇಶಗಳು. ಈ ರಾಷ್ಟ್ರಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಶೋಷಣೆಗೆ ಒಳಗಾದವರು. ಇಂಥವರಲ್ಲಿ ಲಕ್ಷಾಂತರ ಮಂದಿ ಭಾರತಕ್ಕೆ ಅಕ್ರಮವಾಗಿ ವಲಸೆ ಬಂದಿದ್ದಾರೆ. ಈ ನಿರಾಶ್ರಿತರಿಗೆ ಭಾರತದ ಪೌರತ್ವ ಪಡೆಯುವ ಕಟ್ಟುಪಾಡನ್ನು ಸಡಿಲಿಸಲಾಗಿದೆ. ಇದರ ಹಿಂದೆ ಸರ್ವಧರ್ಮ ಸಮಭಾವದ ಆಶಯವಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಪುಟ 2

## ವೈಯಕ್ತಿಕ ಡೇಟಾ ರಕ್ಷಣೆಗೆ ಮಸೂದೆ 2



## ಮೇಲ್ಮನೆಯಲ್ಲಿ ಸವಾಲು

ಪೌರತ್ವ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ನಿರಾಯಾಸವಾಗಿ ಅನುಮೋದನೆ ಪಡೆಯುವ ಸರ್ಕಾರಕ್ಕೆ ರಾಜ್ಯಸಭೆಯಲ್ಲಿ ಬಹುಮತ ಇಲ್ಲದ್ದರಿಂದ ಸವಾಲು ಎದುರಾಗುವ ಸಾಧ್ಯತೆ ಇದೆ. ಈ ಮಸೂದೆಯನ್ನು ಈಗಾಗಲೇ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಡಿಎಂಕೆ, ಸಮಾಜವಾದಿ ಪಕ್ಷ, ಆರ್‌ಜೆಡಿ ಮತ್ತು ಎಡಪಕ್ಷಗಳು ವಿರೋಧಿಸಿವೆ. ಆದರೆ, ಎಐಎಡಿಎಂಕೆ, ಬಿಜೆಡಿ, ಟಿಆರ್‌ಎಸ್ ಮತ್ತು ವೈಎಸ್‌ಆರ್ ಕಾಂಗ್ರೆಸ್ ಪಕ್ಷಗಳು ಎನ್‌ಡಿಎ ಪರ ನಿಲ್ಲುವ ಲಕ್ಷಣ ಇರುವುದರಿಂದ ಮಸೂದೆ ಹಾದಿ ಸುಗಮ ಎಂಬುದು ಬಿಜೆಪಿ ಲೆಕ್ಕಾಚಾರ.

## ಭಾರತ್ ಬಾಂಡ್ ಘೋಷಣೆ

ವ್ಯಾಪಾರ ವಿನಿಮಯ ನಿಧಿ (ಇಟಿಎಫ್) ಅಡಿಯಲ್ಲಿ ಭಾರತ ಬಾಂಡ್‌ಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಶ್ರೀಸಾಮಾನ್ಯರು ಬಾಂಡ್ ಮಾರ್ಕೆಟ್‌ಗೆ ಪ್ರವೇಶಪಡೆಯಲು ಈ ಯೋಜನೆ ಸಹಕಾರಿಯಾಗಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

## ಯಾರು ಅರ್ಹರು?

ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನಗಳಿಂದ 2014ರ ಡಿಸೆಂಬರ್‌ಗೂ ಮೊದಲು ಅಕ್ರಮವಾಗಿ ವಲಸೆ ಬಂದ ಹಿಂದು, ಕ್ರಿಶ್ಚಿಯನ್, ಸಿಖ್, ಜೈನ, ಬೌದ್ಧ ಮತ್ತು ಪಾರ್ಸಿ ಸಮುದಾಯದವರನ್ನು ಉದ್ದೇಶಿತ ಮಸೂದೆಯಲ್ಲಿ ಪೌರತ್ವಕ್ಕೆ ಪರಿಗಣಿಸಲಾಗಿದೆ. ಯಾವುದೇ ದಾಖಲೆ ಇಲ್ಲದೆ ವಲಸೆ ಬಂದ ಅಥವಾ ದಾಖಲೆಗಳ ಅವಧಿ ಮುಕ್ತಾಯವಾದ ಮುಸ್ಲಿಮೇತರ ನಿರಾಶ್ರಿತರು ಮಾತ್ರ ಪೌರತ್ವಕ್ಕೆ ಅರ್ಹರೆಂದು ಉಲ್ಲೇಖಿಸಲಾಗಿದೆ.

## ಮೀಸಲಿಗಿಲ್ಲ ತಡೆ

- ಪರಿಶಿಷ್ಟ ಜಾತಿ, ಪಂಗಡದವರಿಗೆ ಶಿಕ್ಷಣ, ಉದ್ಯೋಗ ಮೀಸಲಾತಿ ಇನ್ನು 10 ವರ್ಷ ಮುಂದುವರಿಕೆಗೆ ಸಮ್ಮತಿ
- ಹಿರಿಯ ನಾಗರಿಕರ ಕುರಿತ ಪಾಲಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಹಾಗೂ ಕಲ್ಯಾಣ ತಿದ್ದುಪಡಿ ಮಸೂದೆಗೆ ಒಪ್ಪಿಗೆ

# ನಿರಾಶ್ರಿತರಿಗೆ ನಾಗರಿಕತ್ವ

ಮೊದಲನೇ ಪುಟದಿಂದ

**ಕಿಡಿ ಹಚ್ಚಿದ ಹೇಳಿಕೆ:** ದೇಶದಲ್ಲಿ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಇದ್ದರೂ ಭಾರತ ಹಿಂದೂರಾಷ್ಟ್ರ ಎಂದು ಬಿಜೆಪಿ ಸಂಸದ ರವಿ ಕಿಶನ್ ನೀಡಿದ ಹೇಳಿಕೆಯನ್ನು ವಿಪಕ್ಷಗಳು ಖಂಡಿಸಿವೆ.

**1955ರ ಕಾಯ್ದೆ ಏನು ಹೇಳುತ್ತದೆ?:** 1955ರಲ್ಲಿ ಜಾರಿಗೆ ಬಂದ ಪೌರತ್ವ ಕಾಯ್ದೆಯಲ್ಲಿ 11 ವರ್ಷಗಳಿಂದ ಭಾರತದಲ್ಲಿ ನಿರಾಶ್ರಿತರಾಗಿರುವವರು ಪೌರತ್ವ ಪಡೆಯಲು ಅರ್ಹರು. ಇಂಥವರು ಪೌರತ್ವಕ್ಕೆ ಅರ್ಜಿ ಸಲ್ಲಿಸಿದ ದಿನಾಂಕಕ್ಕೂ ಕೊನೆಯ ಒಂದು ವರ್ಷದಿಂದ ಭಾರತ ಬಿಟ್ಟು ಬೇರೆಡೆಗೆ ಹೋಗಿರಬಾರದು. ಉದ್ದೇಶಿತ ತಿದ್ದುಪಡಿಯಲ್ಲಿ 11 ವರ್ಷದ ಕಟ್ಟಳೆಯನ್ನು ನೆರೆಹೊರೆ ಮೂರು ದೇಶಗಳಿಂದ ಅಕ್ರಮವಾಗಿ ವಲಸೆ ಬಂದ ಮುಸ್ಲಿಮೇತರ ಆರು ಧರ್ಮೀಯರಿಗೆ 6 ವರ್ಷಕ್ಕೆ ಇಳಿಸಲಾಗಿದೆ.

**ಪ್ರತಿಪಕ್ಷಗಳ ವಿರೋಧವೇಕೆ?:** ಉದ್ದೇಶಿತ ಮಸೂದೆಯಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಳ್ಳಲಾಗಿದೆ. ಇದು ಸಂವಿಧಾನದಲ್ಲಿ ಉಲ್ಲೇಖಿಸಿರುವ ಜಾತ್ಯತೀತ ಆಶಯಕ್ಕೆ ವಿರುದ್ಧವಾಗಿದೆ. ಹೀಗಾಗಿ ಪೌರತ್ವ ತಿದ್ದುಪಡಿ ಮಸೂದೆ ಸಂವಿಧಾನದ 14ನೇ ವಿಧಿಯಲ್ಲಿ ಉಲ್ಲೇಖಿಸಲಾದ 'ಸಮಾನತೆಯ ಹಕ್ಕ'ನ್ನು ಉಲ್ಲಂಘಿಸುತ್ತದೆ ಎಂಬುದು ಪ್ರತಿಪಕ್ಷಗಳು ಮತ್ತು ಈ ಮಸೂದೆಯ ಟೀಕಾಕಾರರ ವಾದ.

**ಸರ್ಕಾರ ಏನು ಹೇಳುತ್ತದೆ?:** ಪೌರತ್ವ ತಿದ್ದುಪಡಿ ಮಸೂದೆಯಲ್ಲಿ 'ಅಕ್ರಮ ವಲಸಿಗರು' ಯಾರು ಎಂಬುದನ್ನು ಸ್ಪಷ್ಟವಾಗಿ ಗುರುತಿಸುವ ಮಾನದಂಡಗಳಿವೆ. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನಗಳಲ್ಲಿ ಧಾರ್ಮಿಕ ಕಾರಣಕ್ಕೆ ದೌರ್ಜನ್ಯಕ್ಕೆ ಒಳಗಾಗಿ ಆಶ್ರಯಕಳೆದುಕೊಂಡು ಭಾರತಕ್ಕೆ ಬಂದ ಮುಸ್ಲಿಮೇತರರನ್ನು ಮಾತ್ರ ಪೌರತ್ವಕ್ಕೆ ಪರಿಗಣಿಸಲಾಗುತ್ತದೆ ಎಂಬುದು ಸರ್ಕಾರದ ಸ್ಪಷ್ಟನೆ.

**ಈ ಹಿಂದೆ ಕೂಡ ಮಂಡನೆಯಾಗಿತ್ತು:** ಪೌರತ್ವ ತಿದ್ದುಪಡಿ ವಿಧೇಯಕ ಸಂಸತ್‌ನಲ್ಲಿ ಮೊದಲು ಮಂಡನೆಯಾಗಿದ್ದು 2016ರಲ್ಲಿ. ಪ್ರತಿಪಕ್ಷಗಳ ಒತ್ತಾಯದ ಕಾರಣ ಜಂಟಿ ಸಂಸದೀಯ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿತ್ತು. ಈ ಸಮಿತಿ ಕಳೆದ ಜನವರಿಯಲ್ಲಿ ವರದಿ ನೀಡಿತು. ವರದಿಯ ಶಿಫಾರಸಿನಂತೆ ಕೆಲವು ಮಾರ್ಪಾಟು ಮಾಡಿ ಬಜೆಟ್ ಅಧಿವೇಶನದಲ್ಲಿ ಮಸೂದೆಯನ್ನು ಮತ್ತೆ ಮಂಡಿಸಲಾಗಿತ್ತು. ಇದಕ್ಕೆ ಲೋಕಸಭೆಯಲ್ಲಿ ಅನುಮೋದನೆ ಸಿಕ್ಕಿತ್ತು. ಆದರೆ, ರಾಜ್ಯಸಭೆಯಲ್ಲಿ ದೊರೆಯಲಿಲ್ಲ. ಅಷ್ಟರಲ್ಲಿ 16ನೇ ಲೋಕಸಭೆಯ ಅವಧಿ ಮುಕ್ತಾಯವಾಯಿತು.

**ಎನ್‌ಆರ್‌ಸಿಗೆ ಸಂಬಂಧವಿಲ್ಲ:** ಅಸ್ಸಾಂನಲ್ಲಿ ನಡೆದಿರುವ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ದೇಶಾದ್ಯಂತ ವಿಸ್ತರಿಸುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಲವು ವೇದಿಕೆಗಳಲ್ಲಿ ಹೇಳಿದ್ದಾರೆ. ಈ ಎನ್‌ಆರ್‌ಸಿಗೂ ಪೌರತ್ವ ತಿದ್ದುಪಡಿ ಮಸೂದೆಗೂ ಸಂಬಂಧವಿವೆ ಎಂಬುದು ಪ್ರತಿಪಕ್ಷಗಳ ಆರೋಪ. ಆದರೆ ಇದನ್ನು ಸಚಿವ ಅಮಿತ್ ಷಾ ಅಲ್ಲಗಳೆದಿದ್ದಾರೆ.



## ವೈಯಕ್ತಿಕ ಡೇಟಾ ಸಂರಕ್ಷಣೆಗೆ ಮಸೂದೆ

ವ್ಯಕ್ತಿಗತ ಮಾಹಿತಿಯನ್ನು ಸಂರಕ್ಷಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಈ ಮಸೂದೆ ಚಳಿಗಾಲದ ಅಧಿವೇಶನದಲ್ಲೇ ಮಂಡನೆಯಾಗಲಿದೆ ಎಂದ ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ ಜಾವಡೇಕರ್, ಮಸೂದೆಯ ಪ್ರಮುಖ ಅಂಶಗಳ ಬಗ್ಗೆ ವಿವರ ನೀಡಲು ನಿರಾಕರಿಸಿದರು. ಸಂಸತ್ತಿಗೆ ಈ ಕುರಿತು ಮೊದಲು ಮಾಹಿತಿ ನೀಡಲಾಗುವುದು ಎಂದರು. ಐರೋಪ್ಯ ಒಕ್ಕೂಟದ ಸಾಮಾನ್ಯ ಡೇಟಾ ಸಂರಕ್ಷಣೆಯ ನಿಯಂತ್ರಣ ಕಾಯ್ದೆ ಮಾದರಿಯಲ್ಲೇ ಕರಡು ಮಸೂದೆಯನ್ನು ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ನೇತೃತ್ವದ ಸಮಿತಿ 2018ರಲ್ಲಿ ಸಿದ್ಧಪಡಿಸಿದೆ. ವ್ಯಕ್ತಿಗಳಿಂದ ಪಡೆಯುವ ವೈಯಕ್ತಿಕ ಮಾಹಿತಿ ಸಂಗ್ರಹಕ್ಕೆ ಯಾವ ಕ್ರಮ, ಕಾಪಿಡುವಿಕೆ ಮತ್ತು ಅದರ ನಿರ್ವಹಣೆಗೆ ನಿಯಮಗಳನ್ನು ರೂಪಿಸಲಾಗಿದೆ. ವೈಯಕ್ತಿಕ ವಿವರ ದುರ್ಬಳಕೆಯಾದರೆ, ಏನು ಶಿಕ್ಷೆ ಮತ್ತು ದಂಡ ಹಾಗೂ ಪರಿಹಾರ ಎಂಬ ಅಂಶಗಳನ್ನು ಮಸೂದೆ ಒಳಗೊಂಡಿದೆ.



ಪೌರತ್ವ ತಿದ್ದುಪಡಿ ಮಸೂದೆ ಸರ್ಕಾರದ ಅತ್ಯಂತ ಆದ್ಯತಾ ವಿಷಯ. ಇದು 370ನೇ ವಿಧಿ ರದ್ದತಿಯಷ್ಟೇ ಪ್ರಮುಖವಾದುದು.

ರಾಜನಾಥ್ ಸಿಂಗ್
ರಕ್ಷಣಾ ಸಚಿವ

## ಯಾರಿಗೆ ಅನ್ವಯ ಇಲ್ಲ?

ಪೌರತ್ವ ತಿದ್ದುಪಡಿ ಮಸೂದೆಯಿಂದ ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಿಜೋರಾಂ, ಅಸ್ಸಾಂ, ಮೇಘಾಲಯ, ತ್ರಿಪುರಾ ರಾಜ್ಯಗಳಲ್ಲಿ 'ಇನ್ನರ್ ಲೈನ್ ಪರ್ಮಿಟ್' ಎಂದು ಗುರುತಿಸಲಾಗಿರುವ ಪ್ರದೇಶವನ್ನು ಹೊರಗಿರಿಸಲಾಗಿದೆ ಮತ್ತು ಸಂವಿಧಾನದ 6ನೇ ಪರಿಚ್ಛೇದದಲ್ಲೂ ಇದನ್ನು ನಮೂದಿಸಲಾಗಿದೆ. 1873ರ ಬೆಂಗಾಳ ಈಶಾನ್ಯ ಗಡಿನಾಡು ನಿಯಂತ್ರಣದ ಪ್ರಕಾರ ಈ ರಾಜ್ಯಗಳಲ್ಲಿ 'ಇನ್ನರ್ ಲೈನ್' ಅನ್ನು ಗುರುತಿಸಲಾಗಿದೆ.